ಕೇಳಿದ್ದೆ. ಆದರೆ ಆ ಬಡಪಾಯಿಗೋ ಮೇಲೇರಿಬರುತ್ತಿದ್ದ ಏದುಸಿರು ಮಾತನಾಡಲು ಬಿಟ್ಟಿರಲಿಲ್ಲ. ಅವನ ಅವಸ್ಥೆಯನ್ನು ನೋಡಿ ನಾನೂ ಸ್ವಲ್ಪ ಹೊತ್ತು ಸುಮ್ಮನಾಗಿದ್ದೆ. ಉಸಿರು ದಬ್ಬುತ್ತಲೇ ಮೆಲ್ಲನೆ ಬುಟ್ಟಿಯ ಕಟ್ಟು ಬಿಚ್ಚಿ ನೆಲಕ್ಕೂರಿ, ಮಗನನ್ನು ಅದರೊಳಗಿಂದ ಎತ್ತಿ ಅಲ್ಲೇ ಇದ್ದ ಬಂಡೆಯೊಂದರ ಮೇಲೆ ಪ್ರಯಾಸದಿಂದ ಕೂರಿಸಿ ಉಸ್ಸಪ್ಪ ಎಂದು ತಾನೂ ಕುಕ್ಕರಿಸಿಬಿಟ್ಟಿದ್ದ.

ತುಸು ಹೊತ್ತು ಸುಧಾರಿಸಿಕೊಂಡವನೇ ಬುಟ್ಟಿಯೊಳಗಿದ್ದ ಕೈಚೀಲದಿಂದ ನೀರಿನ ಬಾಟ್ಲಿ ತೆಗೆದು ಸ್ವಲ್ಪ ತಾನು ಕುಡಿದು ಮಗನಿಗೂ ಕುಡಿಸಿ ಅಂಗಿ ತುದಿಯಿಂದ ಬಾಯೊರೆಸಿಕೊಂಡು...

''ಅನಂತಪ್ಪ ಬೆಳ್ಗಿಂದ ತಿರ್ಗಿತಿರ್ಗಿ, ಉರಿ ಬಿಸ್ಲಿಂದಾಗಿ ಹೀಂಗೆ ಮೈಯೆಲ್ಲಾ ಸುಟ್ಹೋಗದೆ ನೋಡಿ... ಮಗುನ್ನ ಕರ್ಕೊಂಡು ಸೀತಾಳಿ ಗುಡ್ಡದ ಕಡೆಗೆ, ಬೆಣ್ಣೆಹೊಳೆ ದಡಕ್ಕೆ, ಗುಡ್ಡಳ್ಳಿ ವಿರೂಪಾಕ್ಷ ಗುಡಿಗೆ ಎಲ್ಲಾ ಹೋಗಿ ಈಗ ಇಲ್ಲಿಗೆ ಬಂದಿದ್ದಾಯ್ತು... ಇನ್ನು ಇಲ್ಲಿಂದ ಸೀದಾ ಮನಿಗೆ ಹೋಗಿ ಬಿದ್ಕಂಡ್ರೆ ನಾಳೆ ಸಂಜಿಗೇ ಏಳದು ನೋಡಿ. ಮೈಕೈಯೆಲ್ಲಾ ಲಟಕ್ ಅಂದ್ಬಿಟ್ಟದೆ, ಅದ್ಕೇ ಎರ್ಡು ದಿವ್ಸ ರಜೆ ಕೇಳಿದ್ದಾಗಿತ್ರ ಒಂದಿವ್ಸ ತಿರ್ಗದು, ಮತ್ತೊಂದಿವ್ಸ ಬಿದ್ಕಳದು'' ಎನ್ನಲು ಅಪ್ರಯತ್ನವಾಗಿ ನನ್ನ ಹುಬ್ಬೇರಿತ್ತು!

ಅಷ್ಟೇನೂ ಗಟ್ಟಿಮುಟ್ಟಲ್ಲದ ಜೋತಯ್ಯ ಅದು ಹೇಗೆ ಇಷ್ಟೆಲ್ಲಾ ತಿರುಗುತ್ತಿದ್ದಾನಪ್ಪ ಎಂದೆನಿಸಿ ಕುತೂಹಲವುಂಟಾಗಿ ಏನನ್ನೋ ಕೇಳಲು ಹೊರಟಾಗಲೇ, ಅತ್ತಲ್ಲಿಂದ ಮಗಳ ಜೋರು ಬೊಬ್ಬೆ ಕೇಳಿಬರಲು ಗಮನ ಅತ್ತ ಹೋಗಿತ್ತು.

ಶಾರ್ವರಿಯು ತನ್ನ ಬಣ್ಣದ ಕೊಡೆಯನ್ನು ಬಿಡಿಸಿಕೊಂಡು ನಲಿಯುತ್ತಿದ್ದುದನ್ನೇ ಆಸೆಗಣ್ಣಿನಲ್ಲಿ ನೋಡುತ್ತಿದ್ದ ಸರಿಸುಮಾರು ಅವಳದೇ ವಯಸ್ಸಿನ ಶೇಖರ ತನಗೂ ಆ ಕೊಡೆ ಬೇಕೆಂದು ಕೇಳಿದ್ದೇ ಅವಳ ಬೊಬ್ಬೆಗೆ ಕಾರಣವಾಗಿತ್ತು. ಅಂತೂ ಕಡೆಗೆ ಹೇಗೋ ಇಬ್ಬರಿಗೂ ಸಮಾಧಾನಿಸಿ, ನನ್ನ ಕಿಸೆಯಲ್ಲಿ ಅಡಗಿಸಿ ತಂದಿದ್ದ ಒಂದು ದೊಡ್ಡ ಕ್ಯಾಡ್‌ಬರಿ ಚಾಕಲೇಟನ್ನು ಇಬ್ಬರಿಗೂ ಭಾಗ ಮಾಡಿ ಕೊಡಲು ಇಬ್ಬರೂ ಅದನ್ನು ಸವಿಯುತ್ತಾ, ಮೆಲ್ಲನೆ ದೋಸ್ತಿಯಾಗಿ, ಆಕೆ ಈ ಸಲ ತಾನಾಗಿಯೇ ಕೊಡೆಯನ್ನು ಅವನಿಗೂ ಹಿಡಿಯಲು, ಅದು ಗಾಳಿಗೆ ಹಾರುವಾಗ ಹೋ ಎಂದು ಇಬ್ಬರೂ ಬೊಬ್ಬಿರಿಯುವಾಗ ಗುಡ್ಡದ ವ್ಯೂ ಪಾಯಿಂಟಿಗೂ ಕಳೆಗಟ್ಟಿತ್ತು. ಇಬ್ಬರೂ ಮಕ್ಕಳು ಸಂಭ್ರಮಿಸುವುದ ಕಂಡು ಮೈಮರೆತಿದ್ದ ನನಗೆ ಥಟ್ಟನೆ ಮತ್ತೆ ಜೋತಯ್ಯನ ಕಡೆಗೆ ಗಮನ ಹೋಗಿತ್ತು.

''ಅಲ್ವೋ ಮಾರಾಯಾ, ಅದೆಂತಕ್ಕೆ ಇವತ್ತು ಅಷ್ಟೆಲ್ಲಾ ತಿರ್ಗಾಡಿದ್ದು ನೀನು? ಮಗೂಗೆ ಒಳ್ಳೇ ಡಾಕ್ಟ್ರ ಹತ್ರ ತೋರಿಸ್ಬೇಕು... ಅದು ಬಿಟ್ಟು ಗುಡಿ, ದೇವಸ್ಥಾನ ಅಂತ ತಿರುಗಿದ್ರೆ ಸರಿಹೋಗ್ತದೋ? ಬೇಕಿದ್ರೆ ಹೇಳು, ನಾನು ಕೈಲಾದ್ದು ಮಾಡ್ತೀನಿ'' ಎನ್ನಲು ಆತ ಮತ್ತದೇ ಮುಗುಳ್ನಗೆಯನ್ನು ಸೂಸಿ ತಲೆಕೊಡವಿದ್ದ.

''ಅನಂತಪ್ಪ, ನಾ ನಂಗೆ ತಿಳ್ದಷ್ಟಿಗೆ ಎಲ್ಲಾ ಥರದ ಔಸ್ದಿನೂ ಮಾಡಿಸ್ಬಿದ್ದೀನ್ರಾ... ಮುಂದಿನ್ ತಿಂಗ್ಳ ನಿಮ್ಮೂರಿಗೂ ಬರೋ ಪ್ಲಾನ್ ಅದೆ ನಮ್ದು... ನೋಡ್ವ ಹಣೇಲಿ ಭಗವಂತ ಬರೆದಾಂಗಾಗ್ತದೆ. ನಾನು ಇವತ್ತು ತಿರ್ಗಿದ್ದು ಅದ್ಕಲ್ರ'' ಎಂದು ಉಗುಳು ನುಂಗಲು ನನಗೆ ಅವನ ಕಚ್ಚಿಬಿಟ್ಟ ಮಾತಾಡೋ ರೀತಿ ಕಂಡು ಕಿರಿಕಿರಿಯಾಗಿಬಿಟ್ಟಿತ್ತು.

''ನೀ ಸಮಾ ಎಂತದು ಅಂತ ಹೇಳ್ಬಿಡು ಮಾರಾಯಾ. ಗುಟ್ಟುಪಟ್ಟು ಎಲ್ಲಾ ಮಾಡ್ಕೊಂಡು ರಜೆ ಕೇಳಿದ್ರೆ ಹೇಂಗೆ? ಪ್ರತಿ ಸಲ ಅಪ್ಪಯ್ಯನ ಹತ್ರ ನಾ ಬೈಸಿಕೊಳ್ಳೋದಾಗಿದೆ. ನಾಡಿದ್ದು ನಾನು ಊರಿಗೆ ಹೋಗ್ಬಿಟ್ರೆ ನಿಂಗೆ ರಜೆ ಕೊಡ್ಸೋರು ಯಾರು ಹೇಳು? ವಿಷ್ಯ ಸರಿಯಾಗಿ ಹೇಳ್ಬೇಕಪ್ಪಾ'' ತುಸು ಗಡುಸಾಗೇ ಹೇಳಲು ಅಂವ ತಲೆತಗ್ಗಿಸಿಬಿಟ್ಟಿದ್ದ.

''ಅನಂತಪ್ಪ ನನ್ನ ಮಗನಿಗೆ ಈಗ ನಾಲ್ಕು ವರ್ಷ. ಎರ್ಡು ವರ್ಷದಿಂದ ಪೇಟೆ ಡಾಕ್ಟ್ರೆಲ್ಲಾ ನೋಡಿದ್ದಾಯ್ತು... ಹತ್ರ ಇರೋ ಪಟ್ಣಕ್ಕೂ ಹೋಗಿ ದೊಡ್ಡಾಸ್ಪತ್ರೆಗೂ ತೋರ್ಸಾಯ್ತು. ಊರು